**ಕರ್ನಾಟಕ ಸರ್ಕಾರ**

ಸಂಖ್ಯೆ: ಪಪೂಶಿಇ/ಪರೀಕ್ಷೆ/ಫೋಮಮೌ/2013-14.

ಆಯುಕ್ತರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
ಸಂಪಿಗೆ ರಸ್ತೆ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು- 12
ದಿನಾಂಕ:29-07-2013

**ಸು ತ್ತೋ ಲೆ**

ವಿಷಯ : 2013ರ ಜುಲೈ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಯ ಉತ್ತರ ಪತ್ರಿಕೆಗಳ ಫೋಟೋಪ್ರತಿ, ಮರುಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ಅರ್ಜಿ ಸಲ್ಲಿಸುವ ಬಗ್ಗೆ.

ಉಲ್ಲೇಖ : ಈ ಕಛೇರಿಯ ಅಧಿಸೂಚನೆ ದಿನಾಂಕ 24-05-2002

*******

"ಕರ್ನಾಟಕ ಪ್ರೀ ಯೂನಿವರ್ಸಿಟಿ ಕೋರ್ಸ್ ಸ್ಟೇಟ್ ಲೆವೆಲ್ ಪರೀಕ್ಷೆ ನಿಯಮಾವಳಿ 1997ರ ನಿಯಮ 29(1) ಹಾಗೂ 30(1)ರ ಪ್ರಕಾರ ದ್ವಿತೀಯ ಪಿಯುಸಿ ಪರೀಕ್ಷೆಯ ಉತ್ತರ ಪತ್ರಿಕೆಗಳ ಫೋಟೋಪ್ರತಿ ಪಡೆಯಲು, ಮರುಮೌಲ್ಯಮಾಪನ ಹಾಗೂ ಮರುಎಣಿಕೆಗಾಗಿ ಅರ್ಜಿ ಸಲ್ಲಿಸಲು ಅವಕಾಶವಿರುತ್ತದೆ.

**ಈ ಸಂಬಂಧದ ನಿಯಮಗಳು ಹಾಗೂ ನಿಬಂಧನೆಗಳು:-**

1. ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಾಗಿ / ಮರುಮೌಲ್ಯಮಾಪನಕ್ಕಾಗಿ / ಮರುಎಣಿಕೆಗಾಗಿ ದಿನಾಂಕ:31-07-2013 ರಿಂದ ಅರ್ಜಿ ಸಲ್ಲಿಸಬಹುದು

2. **ಬೆಂಗಳೂರು** ನಗರದಲ್ಲಿನ **"Bangalore One"** ಕೌಂಟರ್‌ಗಳಲ್ಲಿ ಹಾಗೂ ಇತರೆ ನಗರಗಳಾದ ಹುಬ್ಬಳ್ಳಿ-ಧಾರವಾಡ, ತುಮಕೂರು, ಮೈಸೂರು, ಶಿವಮೊಗ್ಗ, ಮಂಗಳೂರು, ದಾವಣಗೆರೆ, ಗುಲ್ಬರ್ಗಾ, ಬೆಳಗಾಂ ಮತ್ತು ಬಳ್ಳಾರಿ ಈ ಜಿಲ್ಲಾ ಕೇಂದ್ರಗಳಲ್ಲಿನ **"Karnataka One"** ಕೌಂಟರ್‌ಗಳಲ್ಲಿ ಫೋಟೋಪ್ರತಿ, ಮರುಮೌಲ್ಯಮಾಪನ ಮತ್ತು ಮರುಎಣಿಕೆಗಾಗಿ ನಗದು ಶುಲ್ಕಪಾವತಿಸಿ ಅರ್ಜಿಸಲ್ಲಿಸಲು ವ್ಯವಸ್ಥೆ ಮಾಡಲಾಗಿದೆ. ವಿದ್ಯಾರ್ಥಿಗಳು ಈ ಕೇಂದ್ರಗಳಲ್ಲಿ ನೇರವಾಗಿ ನಗದು ಹಣ ಪಾವತಿಸಿ ಸ್ವೀಕೃತಿ ಪಡೆಯಬಹುದು.

3. **"Bangalore One"** ಕೇಂದ್ರಗಳ ವಿಳಾಸ ಹಾಗೂ **"Karnataka One"** ಕೇಂದ್ರಗಳ ವಿಳಾಸ ಹೊಂದಿರುವ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ. ಈ ಮಾಹಿತಿಗಳನ್ನು ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಿ ವಿದ್ಯಾರ್ಥಿಗಳ ಗಮನಕ್ಕೆ ತರುವಂತೆ ಪ್ರಾಚಾರ್ಯರಿಗೆ ಸೂಚಿಸಿದೆ.

4. **"Bangalore One"** ಮತ್ತು **"Karnataka One"** ಕೇಂದ್ರಗಳ ಸೌಲಭ್ಯವಿಲ್ಲದ ಜಿಲ್ಲೆಗಳಲ್ಲಿನ ವಿದ್ಯಾರ್ಥಿಗಳು ನಿಗದಿತ ಅರ್ಜಿ ನಮೂನೆಗಳನ್ನು ಮತ್ತು ಚಲನ್ ಅನ್ನು ಆಯಾ ಕಾಲೇಜುಗಳಿಂದ ಪಡೆಯುವುದು ಅಥವಾ ಇಲಾಖೆಯ ವೆಬ್‌ಸೈಟ್ **www.pue.kar.nic.in** ನಲ್ಲಿ ಡೌನ್‌ಲೋಡ್ ಮಾಡಿಕೊಂಡು ವಿವರಗಳನ್ನು ಭರ್ತಿಮಾಡಿ ನಿಗದಿತ ಶುಲ್ಕಗಳನ್ನು ಕಡ್ಡಾಯವಾಗಿ ಖಜಾನೆ ಚಲನ್ ಮೂಲಕವೇ ಪಾವತಿಸಿ ಅದನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು.

5. ಹೀಗೆ ಭರ್ತಿ ಮಾಡಿದ ಅರ್ಜಿಯೊಂದಿಗೆ ನಿಗದಿತ ಶುಲ್ಕ ಪಾವತಿಸಿರುವ ಮೂಲ ಖಜಾನೆ ಚಲನ್‌ನನ್ನು ಸ್ಪೀಡ್‌ಪೋಸ್ಟ್ / ಕೊರಿಯರ್ ಮೂಲಕ **ಉಪನಿರ್ದೇಶಕರು (ಪರೀಕ್ಷೆ), ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-560012** ಇವರ ವಿಳಾಸಕ್ಕೆ ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಸಂಜೆ 5:30 ಗಂಟೆಗಳ ಒಳಗೆ ತಲುಪುವಂತೆ ಕಳುಹಿಸುವುದು. ನಿಗದಿತ ದಿನಾಂಕದ ನಂತರ ತಲುಪಿದ ಅರ್ಜಿಗಳನ್ನು ಮತ್ತು ಅಪೂರ್ಣ ಅರ್ಜಿಗಳನ್ನು ಯಾವುದೇ ಸೂಚನೆ ಇಲ್ಲದೆ ತಿರಸ್ಕರಿಸಲಾಗುವುದು.

**ಎ. ಉತ್ತರ ಪತ್ರಿಕೆಯ ಫೋಟೋಪ್ರತಿ ಬಗ್ಗೆ :**

1. ಉತ್ತರ ಪತ್ರಿಕೆಯ ಫೋಟೋಪ್ರತಿಗಾಗಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 06-08-2013
2. ಫೋಟೋ ಪ್ರತಿಯ ಶುಲ್ಕ - ಪ್ರತಿ ವಿಷಯಕ್ಕೆ **ರೂ.420-00**
3. ಉತ್ತರ ಪತ್ರಿಕೆಗಳ ಫೋಟೋ ಪ್ರತಿಗಳನ್ನು ಅಭ್ಯರ್ಥಿಗಳು ನೀಡಿರುವ ವಿಳಾಸಕ್ಕೆ ಅರ್ಜಿಸಲ್ಲಿಸಲು ನಿಗಧಿಪಡಿಸಿರುವ ಕಡೆಯ ದಿನಾಂಕದಿಂದ 15 ದಿನಗಳೊಳಗಾಗಿ ಇ.ಪಿ.ಪಿ. (Express Parcel Post) ಮೂಲಕ ಕಳುಹಿಸಿಕೊಡಲಾಗುವುದು.

.....................2

ಖುದ್ದಾಗಿ ನೀಡಲಾಗುವುದಿಲ್ಲ. ಆದಕಾರಣ ಯಾವುದೇ ವಿದ್ಯಾರ್ಥಿ ಅಥವಾ ಅವರ ಪೋಷಕರು ಇಲಾಖೆಯ ಕಛೇರಿಗೆ ಬರಬಾರದು.

**ಬಿ. ಉತ್ತರ ಪತ್ರಿಕೆಯ ಮರುಮೌಲ್ಯಮಾಪನ :**

1. ಮರುಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ : 12-08-2013
2. ಮರುಮೌಲ್ಯಮಾಪನದ ಶುಲ್ಕ - ಪ್ರತಿ ವಿಷಯಕ್ಕೆ ರೂ.1050-00
3. ಮರುಮೌಲ್ಯಮಾಪನದ ಫಲಿತಾಂಶವನ್ನು ಅಭ್ಯರ್ಥಿಯು ನೀಡಿರುವ ವಿಳಾಸಕ್ಕೆ ಇ.ಪಿ.ಪಿ. ಮೂಲಕ ಕಳುಹಿಸಿಕೊಡಲಾಗುವುದು. ಈ ಬಗ್ಗೆ ಖುದ್ದು ವಿಚಾರಣೆ ಅಗತ್ಯವಿರುವುದಿಲ್ಲ. ಆದ ಕಾರಣ ಯಾವುದೇ ವಿದ್ಯಾರ್ಥಿ ಅಥವಾ ಅವರ ಪೋಷಕರು ಇಲಾಖೆಯ ಕಚೇರಿಗೆ ಬರಬಾರದು.
4. ಉತ್ತೀರ್ಣರಾಗಿರುವ ಅಭ್ಯರ್ಥಿಗಳು ಮುಂದಿನ ವ್ಯಾಸಂಗಕ್ಕೆ ಹಾಗೂ ಅನುತ್ತೀರ್ಣ ಅಭ್ಯರ್ಥಿಗಳು ಮುಂದಿನ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಮರುಮೌಲ್ಯಮಾಪನದ ಫಲಿತಾಂಶಕ್ಕಾಗಿ ಕಾಯದೆ ಮುಂದುವರಿಯುವುದು.
5. ಮರುಮೌಲ್ಯಮಾಪನದ ಬಗ್ಗೆ ಮರುಮೌಲ್ಯಮಾಪನ ಕಮಿಟಿಯವರು ತೆಗೆದುಕೊಂಡ ನಿರ್ಧಾರವೇ ಅಂತಿಮ. ಇದರ ಮೇಲೆ ಮರು ಪರಿಶೀಲನೆ ಅಥವಾ ಮೇಲ್ಮನವಿ ಸಲ್ಲಿಸಲು ಅವಕಾಶವಿರುವುದಿಲ್ಲ.
6. ಮರುಮೌಲ್ಯಮಾಪನದಲ್ಲಿ 5 ಅಂಕಗಳವರೆಗೆ, ಹೆಚ್ಚು ಇಲ್ಲವೇ ಕಡಿಮೆಯಾದಲ್ಲಿ ಆ ಅಂಕಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
7. ಮರುಮೌಲ್ಯಮಾಪನದಲ್ಲಿ ಒಟ್ಟು 6 ಅಥವಾ ಅದಕ್ಕಿಂತ ಹೆಚ್ಚಿನ ಅಂಕಗಳು **ಕಡಿಮೆಯಾದಲ್ಲಿ** ಅಂತಹ ಅಂಕಗಳೊಂದಿಗೆ ಫಲಿತಾಂಶವನ್ನು ಪರಿಷ್ಕರಿಸಿ ಪ್ರಕಟಿಸಲಾಗುವುದು. ಆ ವಿಷಯಕ್ಕೆ ಪಾವತಿಸಿರುವ ಶುಲ್ಕವನ್ನು ಹಿಂದಿರುಗಿಸಲಾಗುವುದಿಲ್ಲ.
8. ಮರುಮೌಲ್ಯಮಾಪನದಲ್ಲಿ ಒಟ್ಟು 06 ಅಥವ ಅದಕ್ಕಿಂತ ಹೆಚ್ಚಿನ ಅಂಕಗಳು **ಹೆಚ್ಚಾದಲ್ಲಿ** ಅಂತಹ ಫಲಿತಾಂಶವನ್ನು ಪರಿಷ್ಕರಿಸಿ ಇಲಾಖಾ ವೆಬ್‌ಸೈಟ್ ***www.pue.kar.nic.in*** ನಲ್ಲಿ ಪ್ರಕಟಿಸಲಾಗುವುದು. ಆ ವಿಷಯಕ್ಕೆ ಪಾವತಿಸಿರುವ್ ಮರುಮೌಲ್ಯಮಾಪನ್ ಶುಲ್ಕದ ಹಣವನ್ನು ಅಭ್ಯರ್ಥಿಗೆ ಹಿಂದಿರುಗಿಸಲಾಗುವುದು.
9. **ವಿದ್ಯಾರ್ಥಿಗೆ ಮರುಮೌಲ್ಯಮಾಪನ ಅವಶ್ಯವೆನಿಸಿದಲ್ಲಿ ಫೋಟೋಪ್ರತಿಗಾಗಿ ಕಾಯದೆ ನೇರವಾಗಿ ಮರುಮೌಲ್ಯಮಾಪನಕ್ಕಾಗಿ ಅರ್ಜಿ ಸಲ್ಲಿಸಬಹುದು.**

**ಸಿ. ಅಂಕಗಳ ಮರುಎಣಿಕೆ :**

1. ಅಂಕಗಳ ಮರುಎಣಿಕೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 12-08-2013
2. ಅಂಕಗಳ ಮರುಎಣಿಕೆಗೆ ಶುಲ್ಕ ಪ್ರತಿ ವಿಷಯಕ್ಕೆ ರೂ.280-00
3. ಮರುಎಣಿಕೆ ಫಲಿತಾಂಶವನ್ನು ಅಭ್ಯರ್ಥಿಯ ವಿಳಾಸಕ್ಕೆ ಕಳುಹಿಸಿಕೊಡಲಾಗುವುದು.

**ವಿಶೇಷ ಸೂಚನೆ**

1) ಹೆಚ್ಚಿನ ವಿವರಗಳಿಗೆ ಅರ್ಜಿಗಳ ಹಿಂಬದಿಯಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೆ ಗಮನಿಸುವುದು.

2) ಬೆಂಗಳೂರು ಒನ್ / ಕರ್ನಾಟಕ ಒನ್ ಕೇಂದ್ರಗಳಲ್ಲಿ ಅರ್ಜಿ ಸಲ್ಲಿಸುವಾಗ ವಿಳಾಸಗಳನ್ನು ಪಿನ್‌ಕೋಡ್‌ನೊಂದಿಗೆ ನೀಡುವುದು.

3) ಆಯಾ ಅರ್ಜಿಗಳನ್ನು ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದಂದು ಸಂಜೆ 5.30 ಘಂಟೆಯೊಳಗಾಗಿ ಈ ಕಛೇರಿಗೆ ತಲುಪುವಂತೆ ಕಳುಹಿಸಬೇಕು. ನಿಗದಿತ ದಿನಾಂಕದ ನಂತರ ಬಂದಂತಹ ಅರ್ಜಿಗಳನ್ನು ಮತ್ತು ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

**ಡಿ. 2014ರ ಮಾರ್ಚ್‌ನಲ್ಲಿ ನಡೆಸುವ ದ್ವಿತೀಯ ಪಿಯುಸಿ ಪರೀಕ್ಷೆಯ ಬಗ್ಗೆ:**

2013ರ ಮಾರ್ಚ್ & ಜುಲೈ ಪರೀಕ್ಷೆಯ ಉತ್ತೀರ್ಣ ಫಲಿತಾಂಶವನ್ನು ತಿರಸ್ಕರಿಸಿ ಪರೀಕ್ಷಾ ಶುಲ್ಕ ಪಾವತಿಸಲು ಮತ್ತು ಹಿಂದಿನ ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ಅಭ್ಯರ್ಥಿಗಳು ಪರೀಕ್ಷಾ ಶುಲ್ಕ ಪಾವತಿಸವ ಕುರಿತು ಸುತ್ತೋಲೆ & ಸೂಚನೆಗಳನ್ನು 2013ರ ಜುಲೈ ಪರೀಕ್ಷೆಯ ಉತ್ತೀರ್ಣ / ಅನುತ್ತೀರ್ಣ ಅಂಕಪಟ್ಟಿಗಳೊಂದಿಗೆ ಸಂಬಂಧಪಟ್ಟ ಕಾಲೇಜಿಗೆ ಕಳುಹಿಸಿಕೊಡಲಾಗುವುದು. ಈ ಕುರಿತು ವಿದ್ಯಾರ್ಥಿಗಳು ಕಾಲೇಜಿನೊಂದಿಗೆ ಸಂಪರ್ಕಿಸುವುದು.

**<u>ಪ್ರಾಂಶುಪಾಲರಿಗೆ ವಿಶೇಷ ಸೂಚನೆ:</u>**

2013ರ ಜುಲೈನಲ್ಲಿ ನಡೆಸಿದ ದ್ವಿತೀಯ ಪಿಯುಸಿ ಪೂರಕ ಪರೀಕ್ಷೆಗೆ ಹಾಜರಾಗಿದ್ದು, ಪ್ರಕಟಿತ ಫಲಿತಾಂಶದಲ್ಲಿ ನ್ಯೂನತೆ ಇದ್ದಲ್ಲಿ ದಿನಾಂಕ: **15-08-2013**ರ ಒಳಗಾಗಿ ಕೊಠಡಿ ಮೇಲ್ವಿಚಾರಕರ ದಿನಚರಿ ಮತ್ತು ಇತರೆ ಪೂರಕ ದಾಖಲೆಗಳನ್ನು ಕೇಂದ್ರ ಕಚೇರಿಗೆ ಖುದ್ದಾಗಿ ಒದಗಿಸಿ ಫಲಿತಾಂಶವನ್ನು ಸರಿಪಡಿಸಿಕೊಳ್ಳುವಂತೆ ಸೂಚಿಸಿದೆ. ತದ ನಂತರ ಬಂದಂತಹ ಯಾವುದೇ ರೀತಿಯ ಮನವಿಗಳನ್ನು ಪರಿಗಣಿಸಲಾಗುವುದಿಲ್ಲ, ಮುಂದೆ ಸಂಭವಿಸಬಹುದಾದ ಆಗುಹೋಗುಗಳಿಗೆ ಪ್ರಾಂಶುಪಾಲರನ್ನೇ ನೇರ ಹೊಣೆಗಾರರನ್ನಾಗಿಸಲಾಗುವುದು.

ಆಯುಕ್ತರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

1. ರಾಜ್ಯದ ಎಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರುಗಳಿಗೆ.
2. ಪದವಿ ಪೂರ್ವ ಶಿಕ್ಷಣ ಬೋಧಿಸುವ ರಾಜ್ಯದ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರಿಗೆ.